**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್**

**ಸಿ. ಸಿ. ನಂ.35/2022**

| | | | |
|---|---|---|---|
| ಸಾಕ್ಷಿಧಾರರ ಹೆಸರು | : ವೀರಣ್ಣ ತಿಗರಿ | ಪಿಡಬ್ಲ್ಯೂ | 4 |
| ತಂದೆಃಗಂಡನ ಹೆಸರು | : ಹನುಮರೆಡ್ಡಿ | ಸಿಡಬ್ಲ್ಯೂ | 9 |
| ವಯಸ್ಸು | : 33 ವರ್ಷ | | |
| ಉದ್ಯೋಗ | : ಸಿ ಪಿ ಸಿ 1113 | | |
| ವಾಸಸ್ಥಳ | : ಹಾನಗಲ್ | | |

**ದಿನಾಂಕ 25-04-2023 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ನಾನು ಆಗಸ್ಟ 2016 ರಿಂದ ಇಲ್ಲಿಯವರೆಗೆ ಹಾನಗಲ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 18-7-2021 ರಂದು ನಾನು ಠಾಣೆಯಲ್ಲಿದ್ದಾಗ ಚಾ ಸಾ 14 ರವರು ನನ್ನನ್ನು ಮತ್ತು ಚಾ ಸಾ 10 ರವರನ್ನು ಕರೆದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಳ್ಳತನವಾದ ಕೆ ಎ 25 ಎಎ-2310 ರ ಆಟೋ ರಿಕ್ಷಾವನ್ನು ಮತ್ತು ಆರೋಪಿಯನ್ನು ಪತ್ತೆ ಮಾಡುವಂತೆ ವಿಶೇಷ ಕರ್ತವ್ಯಕ್ಕೆ ನೇಮಕ ಮಾಡಿದರು. ಆ ಪ್ರಕಾರ ನಾನು, ಚಾ ಸಾ 10 ಮತ್ತು ಚಾ ಸಾ 14 ರವರು ಠಾಣೆಯಿಂದ ಹೊರಟು ಹಾನಗಲ್ ಪಟ್ಟಣದಲ್ಲಿ ಗಸ್ತು ಮಾಡಿಕೊಂಡು ಹಾನಗಲ್‌ನ ಆನಿಕೇರಿಯ ಹತ್ತಿರ ಇರುವ ಆರೋಪಿಯ ಮನೆಯ ಮುಂದೆ ಹೋಗುತ್ತಿದ್ದಾಗ ಮೇಲೆ ಹೇಳಿದ ಆಟೋ ರಿಕ್ಷಾ ನಿಂತಿರುವುದು ಕಂಡು ಬಂತು. ಸದರಿ ಆಟೋ ರಿಕ್ಷಾವನ್ನು ಪರಿಶೀಲಿಸಲಾಗಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಆಟೋ ರಿಕ್ಷಾ ಆಗಿತ್ತು. ಆರೋಪಿಯು ಮನೆಯೊಳಗೆ ಹಾಜರಿದ್ದ. ನಾನು, ಚಾ ಸಾ 10 ಮತ್ತು ಚಾ ಸಾ 14 ರವರು ಆರೋಪಿಯನ್ನು ಮತ್ತು ಮೇಲೆ ಹೇಳಿದ ಆಟೋ ರಿಕ್ಷಾವನ್ನು ವಶಕ್ಕೆ ಪಡೆದು ಚಾ ಸಾ 15 ರವರ ಮುಂದೆ ಹಾಜರುಪಡಿಸಿದೆವು. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಮೇಲೆ ಹೇಳಿದ ಆಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿ ಪಿ 6 ರಿಂದ 10 ರ ಭಾವಚಿತ್ರದಲ್ಲಿರುವ ಆಟೋವನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲು : ಆರೋಪಿತರ ಪರ ಶ್ರೀ.ಜಿ ಜಿ ಡಿ ವಕೀಲರಿಂದ</u>

ಆರೋಪಿಯ ಮನೆಯ ಚಕಬಂದಿಯನ್ನು ಹೇಳಲಾಗುತ್ತದೆಯೇ ಎಂದರೆ ಪಂಚನಾಮೆಯಲ್ಲಿ ಚಕಬಂದಿ ಬರೆದಿದ್ದಾರೆ. ಆಟೋ ರಿಕ್ಷಾ ಸಂಖ್ಯೆಕೆ ಎ **25**/ಎಎ **2310.** ಆರೋಪಿಯ ಮನೆಯ ಮುಂದಿನಿಂದಲೇ ಮೇಲೆ ಹೇಳಿದ ಆಟೋವನ್ನು ವಶಕ್ಕೆ ಪಡೆದಿದ್ದೇವೆ ಎಂದು ತೋರಿಸಲು ಪೋಟೊ ತೆಗೆದಿದ್ದೇವೆ ಎಂದರೆ ಇಲ್ಲ. ಆರೋಪಿಯನ್ನು ಮತ್ತು ಆಟೋವನ್ನು ಆರೋಪಿಯ ಮನೆಯ ಮುಂದಿನಿಂದಲೇ ವಶಕ್ಕೆ ಪಡೆದಿದ್ದೇವೆ ಎಂದು ತೋರಿಸಲು ಫೋಟೋ ತೆಗೆಯಲು ತೊಂದರೆ ಇರಲಿಲ್ಲ ಎಂದರೆ ಆ ಬಗ್ಗೆ ಚಾ ಸಾ **14** ರವರಿಗೆ ಗೊತ್ತಿದೆ. ಆರೋಪಿಯ ಮನೆಯ ಮುಂದಿನಿಂದ ಅಲ್ಲಿ ನಿಂತಿದ್ದ ಆಟೋವನ್ನು ಮತ್ತು ಆರೋಪಿಯನ್ನು ವಶಕ್ಕೆಪಡೆದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಆಟೋ ಯಾವತ್ತೂ ಆರೋಪಿಯ ಮನೆಯ ಮುಂದೆ ಇರಲಿಲ್ಲ ಮತ್ತು ಸದರಿ ಆರೋಪಿಗೂ ಆಟೋಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>: ಮರುವಿಚಾರಣೆ : ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್